# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ
## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 06–01–2024** **ಸಮಯ : 2½ ಘಂಟೆ**
**ತರಗತಿ : VII** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ: 10x1=10**

1. ________________ ಎಲ್ಲ ಶಿಕ್ಷಣಕ್ಕಿಂತ ಪ್ರಮುಖವಾದುದು.
(ಮೌಲ್ಯ ಶಿಕ್ಷಣ; ಆರೋಗ್ಯ ಶಿಕ್ಷಣ; ಕಾನೂನು ಶಿಕ್ಷಣ)
2. "ಯಶಸ್ಸಿನ ಮನುಷ್ಯನಾಗಲು ಪ್ರಯತ್ನಿಸಬೇಡ, ಪ್ರತಿಯಾಗಿ ಮೌಲ್ಯದ ಮಾನವನಾಗು" ಇದನ್ನು ಹೇಳಿದವರು ____________
(ಜಾನ್ ವೆಸ್ಲಿ; ಆಲ್ಬರ್ಟ್ ಐನ್‌ಸ್ಟೈನ್; ರಿಚರ್ಡ್)
3. ________________ ಗಳು ಮಾನವ ಕುಟುಂಬದಲ್ಲಿ ಬಂಧಿಸುತ್ತದೆ.
(ಭಾವನೆ; ಕೊಕ್ಕರೆ; ಮೀನು)
4. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ಭಾವನೆಗಳನ್ನು ______ ಮಾಡಿಕೊಳ್ಳಬಲ್ಲ.
(ತಿರಸ್ಕಾರ; ಅರ್ಥ; ಸಮಾಧಾನ)
5. ಸಂಗೀತ ತನ್ನ ಕಲಿಕೆಯಲ್ಲಿ ತುಂಬಾ ______________ ಳು.
(ನಿಷ್ಠಾವಂತ; ಬುದ್ಧಿವಂತ; ಗುಣವಂತ)
6. ______________ ಅಮೇರಿಕಾದ ಅಧ್ಯಕ್ಷರಾದವರು.
(ಬಿಥೋವನ್; ಅಬ್ರಾಹಂ ಲಿಂಕನ್; ಸಲೀಮ)
7. ಸ್ವಾತಂತ್ರ್ಯ ಆಯ್ಕೆ ಮಾಡುವ ನಮ್ಮ ______________ ಅನ್ವಯಿಸುತ್ತದೆ.
(ಆರೋಗ್ಯಕ್ಕೆ; ಸಂತೋಷಕ್ಕೆ; ಸಾಮರ್ಥ್ಯಕ್ಕೆ)
8. ___________ ಮಾನವನ ಘನತೆ ಗೌರವವನ್ನು ಸೂಚಿಸುತ್ತದೆ.
(ಸ್ವಚ್ಛತೆ; ಆಸ್ತಿ; ಅಶುದ್ಧತೆ)
9. ಸಂತೋಷ ________________ ದೊಳಗಿನ ವ್ಯವಹಾರ.
(ಬಹಿರಂಗ; ಅಂತರಂಗ; ಸಾಮಾಜಿಕ)
10. ಪ್ರತಿಯೊಬ್ಬರಲ್ಲೂ ಅನೇಕ ಹುದುಗಿದ __________ ಗಳಿವೆ.
(ಕನಸು; ಪ್ರತಿಭೆ; ಪ್ರೀತಿ)

## II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ : 5x1=5

1. ಸ್ವಾತಂತ್ರ್ಯ ಯಾವಾಗಲೂ ______________ ಯನ್ನು ಎದುರು ನೋಡುತ್ತದೆ.
2. ಸಂತೋಷ ಅದ್ಭುತ ವಸ್ತು. ನೀನು ______________ ಅದು ನಿನ್ನಲ್ಲಿ ಅಧಿಕವಾಗುತ್ತದೆ.
3. ಕಾಯಾ, ವಾಚಾ ______________ ಪ್ರವರ್ಥಿಸುವವರು ಒಳ್ಳೆಯ ಜನರು.
4. ______ ಕೊಡಲಿಯನ್ನು ಕಂಡು ಮರ ಕಡಿಯುವವನು ಸಂತೋಷದಿಂದ ಕೂಗಿದನು.
5. "ವಿಧೇಯತೆ" ಎನ್ನುವುದು ______________ ಮೌಲ್ಯದ ಅಂಶವಾಗಿದೆ.

## III. ಹೊಂದಿಸಿ ಬರೆಯಿರಿ: 5x1=5

| | | |
|---|---|---|
| 1. ಮೌಲ್ಯ ವೆಂದರೆ | – | ಪ್ರತಿಭಾವಂತೆ |
| 2. ಪ್ರೀತಿ | – | ಪ್ರಗತಿಯಿಲ್ಲ |
| 3. ಲಿಲ್ಲಿ | – | ಇತರರನ್ನು ಗೌರವಿಸುತ್ತಾರೆ |
| 4. ಸ್ವಾತಂತ್ರ್ಯವಿಲ್ಲದೆ | – | ಬೆಲೆ |
| 5. ಪ್ರಾಮಾಣಿಕ ವ್ಯಕ್ತಿ | – | ಹೃದಯದ ಮೌಲ್ಯ |

## IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ : 5x1=5

1. ಲಿಲ್ಲಿ ತನ್ನ ಸೋಮಾರಿತನವನ್ನು ಹಳಿದುಕೊಂಡಳು.
2. ಅಳುತ್ತಿರುವ ಮಗುವಿನ ಕೂಗನ್ನು ಕೇಳಿ ತಕ್ಷಣ ಹೆಂಗಸರು ಓಡಿ ಬಂದರು.
3. ಸ್ವಚ್ಛತೆ ಮಾನವನ ಬಡತನವನ್ನು ಸೂಚಿಸುತ್ತದೆ.
4. ಒಬ್ಬರಿಂದ ಒಬ್ಬರಿಗೆ ಹರಡುವ ರೋಗವನ್ನು ಸಾಂಕ್ರಾಮಿಕ ರೋಗ ಎನ್ನುತ್ತೇವೆ.
5. ಮರಗಳು ಜಾಸ್ತಿಯಿದ್ದರೆ ಮಾನವ ಜೀವಿಗಳು ಆರೋಗ್ಯವಂತರಾಗಿ ಬೆಳೆಯುವುದಿಲ್ಲ.

## V. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5

1. ಸ್ವಾತಂತ್ರ್ಯ ಎಂದರೇನು?
2. ಅವಕಾಶವನ್ನು ಕಳೆದುಕೊಂಡಾಗ ನಿನಗೆ ಏನಾಗುತ್ತದೆ?
3. ನಿನ್ನ ಪ್ರತಿಭೆಗಳು ಯಾವುವು?
4. ಮಾನವ ಜೀವಿಗಳ 2 ಗುಣಗಳು ಯಾವುವು?
5. ಆರೋಗ್ಯ ಪ್ರಜ್ಞೆ ಎಂದರೇನು?

**VI. ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ನೈರ್ಮಲ್ಯದ ಸಕಾರತ್ಮಕ ಪರಿಣಾಮಗಳು ಯಾವುವು?
2. ಮೌಲ್ಯ ಶಿಕ್ಷಣದ ಉದ್ದೇಶಗಳಾವುವು?
3. ಇತರರಿಗೆ ಒಳಿತನ್ನು ಮಾಡಲು ನಿನ್ನನ್ನು ಪ್ರೇರೇಪಿಸುವುದೇನು?
4. ಬೀದಿನಾಯಿ ಸ್ವಾತಂತ್ರ್ಯದ ಬಗ್ಗೆ ಸಾಕು ನಾಯಿಗೆ ಏನನ್ನು ಹೇಳಿತು?
5. ಪ್ರಾಮಾಣಿಕತೆಯ ಸಕಾರತ್ಮಕ ರೂಪಗಳಾವುವು?

**VII. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಸಂತೋಷದಿಂದರಲು ಜಾನ್ ಪೋವೆಲ್ ಸೂಚಿಸುವುದೇನು?
2. ನಿಮ್ಮ ಸುತ್ತಮುತ್ತ ಶುದ್ಧತೆಯನ್ನು ಹೇಗೆ ಕಾಪಾಡಬಹುದು?
3. ನಮ್ಮ ಪ್ರತಿಭೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ತೊಡಕಾಗಿರುವ ಅಂಶಗಳು ಯಾವುವು?
4. ನೀನು ತುಂಬಾ ಸಂತೋಷ ಪಟ್ಟ ಒಂದು ಸಂದರ್ಭ ಅಥವಾ ಸಮಾರಂಭದ ಬಗ್ಗೆ ಕೆಲವು ವಾಕ್ಯಗಳಲ್ಲಿ ಬರೆ.
5. ನಿನಗೆ ಮೌಲ್ಯ ಶಿಕ್ಷಣ ತರಗತಿಗಳು ಉಪಯುಕ್ತವಾದವೆ? ಹೇಗೆ?
6. ಮೌಲ್ಯ ಶಿಕ್ಷಣದ ತರಗತಿಗೂ ಇತರ ವಿಷಯಗಳ ತರಗತಿಗೂ ಇರುವ ವ್ಯತ್ಯಾಸವೇನು?
7. ನಿನ್ನ ಜೀವನದಲ್ಲಿ ನೀನು ಕಂಡ ಅತ್ಯುತ್ತಮ ವ್ಯಕ್ತಿ ಯಾರು? ಆ ವ್ಯಕ್ತಿಯಲ್ಲಿ ನೀನು ಕಂಡ 5 ಸದ್ಗುಣಗಳನ್ನು ಬರೆ.

**VIII. ಈ ಕೆಳಗಿನ ಎರಡು ವಿಷಯಗಳ ಕುರಿತು ಟಿಪ್ಪಣಿ ಬರೆಯಿರಿ : 2x5=10**

1. ಆರೋಗ್ಯವು ಒಂದು ದೊಡ್ಡ ಸಂಪತ್ತು
2. ಪ್ರಾಮಾಣಿಕತೆ
3. ನನ್ನ ಸಂತೋಷ

**IX. ಟಿಪ್ಪಣಿ ಓದಿ, ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ಮಹೇಶ 12 ವರ್ಷದ ಬಾಲಕ. ರಸ್ತೆಯನ್ನು ದಾಟಿ ಅವನು ಶಾಲೆಗೆ ಬರುವಾಗ ಒಂದು ದೃಶ್ಯವನ್ನು ಕಂಡನು. ಒಬ್ಬಳು ಅಜ್ಜಿಯು ಬುಟ್ಟಿ ತುಂಬಾ ಹಣ್ಣುಗಳನ್ನು ಹಿಡಿದು ರಸ್ತೆಯನ್ನು ದಾಟಲು ಪ್ರಯತ್ನಿಸುತ್ತಿದ್ದಳು. ವೇಗವಾಗಿ ರಭಸವಾಗಿ ಬರುವ ವಾಹನಗಳ ಮಧ್ಯೆ ದಾಟಲು ಅಜ್ಜಿಗೆ ಕಷ್ಟವಾಗುತ್ತಿತ್ತು. ಇದನ್ನು ಕಂಡ ಮಹೇಶ ಅಜ್ಜಿಯ ಸಹಾಯಕ್ಕೆ ಹೋದನು. ಹಣ್ಣಿನ ಬುಟ್ಟಿಯನ್ನು ತಾನು ಹಿಡಿದು ಆ ಅಜ್ಜಿಯ ಕೈ ಹಿಡಿದು ರಸ್ತೆ ದಾಟಿಸಿ ಬಿಟ್ಟನು. ಅಜ್ಜಿಗೆ ಸಂತೋಷವಾಗಿ ಒಂದು ಹಣ್ಣನ್ನು ಮಹೇಶನಿಗೆ ಕೊಟ್ಟರು.

**a) i) ಮಹೇಶನ ಈ ಸೇವೆ ನಿನಗೆ ಮೆಚ್ಚಿತೆ?**

**ii) ಏಕೆ?**

**b) i) ನಾವು ಇತರರಿಗೆ ಸಹಾಯ ಹಸ್ತ ನೀಡಬೇಕೆ?**

**ii) ಏಕೆ?**

**c) ಹಿರಿಯರಿಗೆ ನಾವು ಯಾವ ರೀತಿ ವಿಧೇಯರಾಗಿರಬೇಕು?**

2. ವೀಣಾ ಮತ್ತು ಗೀತಾ ಒಳ್ಳೆಯ ಸ್ನೇಹಿತೆಯರು ಹಾಗೂ ಸಹಪಾಠಿಗಳು. ಅವರಿಬ್ಬರೂ ಅಕ್ಕ ಪಕ್ಕದ ಮನೆಯವರು. ವೀಣಾ ಮತ್ತು ಗೀತಾ ಆಗಾಗ್ಗೆ ಸುತ್ತಾಡಲು ಹೋಗುತ್ತಿದ್ದರು. ಒಮ್ಮೆ ವೀಣಾ ಬಿದ್ದು ಗಾಯಗೊಂಡಾಗ, ಅವಳನ್ನು ಆಸ್ಪತ್ರೆಗೆ ಸೇರಿಸಿದರು. ಅನೇಕ ವಿಧದ ಪರೀಕ್ಷೆಗೆ ಒಳಪಡಿಸಿದ ನಂತರ ವೈದ್ಯರು ಅವಳು ಕ್ಯಾನ್ಸರ್ ರೋಗಿಯೆಂದು ಗುರುತಿಸಿದರು. ವೀಣಾಳು ಕ್ಯಾನ್ಸರ್ ರೋಗಿಯೆಂದು ತಿಳಿದ ಆ ಕ್ಷಣದಿಂದ ಗೀತಾ ಅವಳ ಭೇಟಿಯನ್ನು ನಿಲ್ಲಿಸಿದಳು. ಆದರೆ ವೀಣಾ, ಗೀತಾಳ ಭೇಟಿಗಾಗಿ ತುಂಬಾ ಹಾತೊರೆಯುತ್ತಿದ್ದಳು.

**a) i) ಗೀತಾಳ ವರ್ತನೆ ನಿನಗೆ ಮೆಚ್ಚಿತೆ?**

**ii) ಏಕೆ?**

**b) i) ಒಂದು ವೇಳೆ ವೀಣಾ ನಿನ್ನ ಪಕ್ಕದ ಮನೆಯವಳಾಗಿದ್ದರೆ ನೀನೇನು ಮಾಡುತ್ತಿದ್ದೆ?**

**c) i) ಇತರರ ಕಷ್ಟದಲ್ಲಿ ನಾವು ಅನುಕಂಪ ತೋರಿಸಬೇಕೆ?**

**ii) ಏಕೆ? ವಿವರಿಸು.**